ಆ ರಾತ್ರಿ ಶಾಲೂ ಬಹಳ ಹೊತ್ತು ನಿದ್ದೆಯಿಲ್ಲದೇ ನರಳಾಡಿದಳು. ಹೊರಳಾಡಿದರೆ ಪಕ್ಕದಲ್ಲೇ ಮಲಗಿದ ಇಂದೂಗೆ ಡಿಸ್ಟರ್ಬ್ ಆಗುತ್ತೆ, ಇಡೀ ದಿನ ಪ್ರಯಾಣ ಮಾಡಿ, ಓಡಾಡಿ ದಣಿದವರಿಗೆ ನಿದ್ರೆಯೊಂದೇ ಎನರ್ಜಿ ಬೂಸ್ಟರ್. ನಾಳೆ ಒಂದು ದಿನ ಇಲ್ಲಿಯೇ ಉಳಿಯುವ ಕಾರ್ಯಕ್ರಮ ಇರುವುದರಿಂದ ಪರವಾಗಿಲ್ಲ. ಆದರೂ ಸಣ್ಣಪುಟ್ಟ ತಿರುಗಾಟ ಇದ್ದೇ ಇದೆ. ನಿದ್ರೆ ಮಾಡಬೇಕು ಎಂದುಕೊಂಡು ಕಣ್ಣು ಮುಚ್ಚಿದಳು. ಯಾಕೆ ಎಲ್ಲೂ ಬರುವುದಿಲ್ಲ ಸಂದೇಶ? ಅವನೇ ಜೊತೆಗಿದ್ದಿದ್ದರೆ ಇವತ್ತಿನ ಈ ಪ್ರಸಂಗ ನಡೆಯುತ್ತಿರಲಿಲ್ಲ. ಗಂಡನ ಜೊತೆಗಿರುವ ಹೆಣ್ಣನ್ನು ಯಾರೂ ಡಾನ್ಸಿಗೆ ಕರೆಯುವ ಸಲಿಗೆ ತೆಗೆದುಕೊಳ್ಳುವುದಿಲ್ಲ. ಛೇ! ಎಂಥ ಗಡಸಿನ ಬಲಿಷ್ಠ ಕೈ ಫೆಲಿಕ್ಸನದು! ಅಷ್ಟೇ ಮೃದು ಅವನ ನಡವಳಿಕೆ. ಹೆಂಡತಿಯೊಡನೆಯೂ ಹೀಗೆಯೇ ಇಷ್ಟೇ ಖುಷಿಯಾಗಿ ಡಾನ್ಸ್ ಮಾಡುತ್ತಿರಬಹುದೇ? ತನ್ನ ಹೆಂಡತಿ, ಮಕ್ಕಳ ಬಗ್ಗೆ ಏನೂ ಹೇಳಲಿಲ್ಲ ಅವನು. ನಾನೂ ಕೇಳಲೇ ಇಲ್ಲ. ಕೆಲ ವರ್ಷಗಳ ನಂತರ ಸಂಬಂಧಗಳು ಒಣಗಿದ ಕಾಷ್ಠದಂತಾಗುತ್ತವೆ. ಮನೆಯ ಕುರ್ಚಿ, ಮೇಜಿಗೆ ಬಳಸಿದ ಪಾಲಿಷ್ ಮಾಡಿದ ಕಟ್ಟಿಗೆಯಂತೆ. ಅವು ಚಿಗುರುವುದಿಲ್ಲ. ನನ್ನ ಸಂದೇಶನ ಸಂಬಂಧದ ಕೊರಡು ಎಂದಾದರೊಮ್ಮೆ ಕೊನರೀತೇ? ಅವೇ ಅವೇ ಹಳಸಲು ಮಾತುಗಳನ್ನಾಡುತ್ತೇವೆ, ಗಂಭೀರವಾಗಿ. ಹಾಲು ತೊಗೊಂಡು ಬಾ, ತರಕಾರಿ ಮುಗಿದಿದೆ, ಲೈಟ್ ಬಿಲ್ ಕಟ್ಟು... ವಾರದಲ್ಲಿ ನಾಲ್ಕು ದಿನ ಮುಖ ಬಿಗಿದುಕೊಂಡು ಇರುತ್ತಾನೆ. ಮಾತನಾಡಿಸಿದರೂ ಕೇಳಿಯೇ ಇಲ್ಲದಂಥ ನಾಟಕ. ಇನ್ನೂ ಹೆಚ್ಚು ಕೆಣಕಿದರೆ ಒಂದೋ ಎರಡೋ ಶಬ್ದಗಳು. ಒಮ್ಮೊಮ್ಮೆ ಅಂಥ ಭಯಂಕರ ಮೌನದಲ್ಲೂ ಹಾಸ್ಯ ಹೊಳೆಯುತ್ತದೆ ನನಗೆ. ಟೂರಿಗೆ ಬರುವ ನಾಲ್ಕು ದಿನಗಳ ಮೊದಲು ಇದೇ ಥರ ಮೊಂಡಾಟ, ಬಿಗುಮಾನಗಳ ಅಭಿನಯ ನಡೆದು ನಾನೂ ಮಾತುಕತೆ ಇಲ್ಲದೇ ಸುಮ್ಮನೇ ಕೆಲಸದಲ್ಲಿ ತೊಡಗಿಕೊಂಡಿದ್ದಾಗ ಕಾಲೇಜಿನಿಂದ ಬಂದ ಮಗಳನ್ನು ಮಾತನಾಡಿಸಲು ತೊಡಗಿದವನನ್ನು ನೋಡಿ, ''ಖಾವಂದರು ಮಾತನಾಡಿದರು'' ಎಂದು ನಕ್ಕಿದ್ದಕ್ಕೆ ಮತ್ತೆ ಕೋಪಗ್ರಹಕ್ಕೆ ತೆರಳಿದವನನ್ನು ಕಂಡು ನಾನು ಮತ್ತೂ ನಕ್ಕಿದ್ದೆ. ''ದಿನಕ್ಕೆ ಒಂದೋ ಎರಡೋ ಮುತ್ತುಗಳು ಬಾಯಿಂದ ಹೊರಬೀಳುತ್ತವೆ, ಅಂದರೆ ಬಡಪ್ರಜೆಗಳು ಕೈ ಹಿಡಿದು ಹಿಡಿಯಾಗಿ ನಿಂತಿರುತ್ತಾರೆ. ಯಾವಾಗ ಸುಲ್ತಾನರು ಬಾಯಿ ತೆರೆಯುತ್ತಾರೋ, ತಕ್ಷಣ ಉದುರಿದ ಮುತ್ತುಗಳನ್ನು ಹೆಕ್ಕಿಕೊಂಡು ಬಿಡೋಣ ಎಂದು'' ಚೇಷ್ಟೆ ಮಾಡಿದ್ದೆ. ಅವನು ಕರಗಲಿಲ್ಲ. ಹೂಂ! ಆದರೆ, ಎಂಥ ಬಿಂಕ, ಬಿಗುಮಾನಗಳೂ ನನ್ನ ಯುರೋಪ್ ಟೂರಿನ ಉತ್ಸಾಹಕ್ಕೆ ತಣ್ಣೀರೆರಚುವುದು ಸಾಧ್ಯವಿರಲಿಲ್ಲ. ನಾನು ಇಡೀ ವಾರ ಗಾಳಿಯಲ್ಲೇ ತೇಲಾಡುತ್ತಿದ್ದೆ. ನನ್ನ ಉತ್ಸಾಹದಲ್ಲಿ ಪಾಲ್ಗೊಳ್ಳಲು ಅವನಿಗೆ ಆಗಲಿಲ್ಲ. ಎಲ್ಲಿ, ಎಂದು, ಯಾವ ಘಳಿಗೆಯಲ್ಲಿ ನಮ್ಮ ದಾರಿಗಳು ಕವಲೊಡೆದವು!

ಮರುದಿನ ಒಂದಿಷ್ಟು ದೂರ ಪ್ರಯಾಣಿಸಿ ಬ್ಲ್ಯಾಕ್ ಫಾರೆಸ್ಟ್‌ನ ಕುಕೂ ಕ್ಲಾಕ್‌ಗಳನ್ನು ನೋಡಿದರು. ದಟ್ಟ ಅರಣ್ಯದಲ್ಲಿ ಸಾಗುವಾಗ ಸ್ವರ್ಗಲೋಕದ ಸೌಂದರ್ಯವೆಲ್ಲ ಧೊಪ್ಪೆಂದು ಇಲ್ಲಿಯೇ ಬಿದ್ದುಬಿಟ್ಟಿದೆ ಎನ್ನುವಷ್ಟು ಸ್ವಚ್ಛ ಸೌಂದರ್ಯ. ಜುಳುಜುಳು ಹರಿಯುವ ಸ್ವಚ್ಛ ನೀರಿನ ತೊರೆಗಳು. ಕನಸಿನ ಮನೆಗಳು. ಹಸಿರು ಕಾಡಿನಲ್ಲಿ ಹೆಬ್ಬಾವು ಹರಿದಂಥ ಕಪ್ಪು ರಸ್ತೆಗಳು. ಮಧ್ಯಾಹ್ನದ ಊಟದ ನಂತರ ಕೋಚ್ ಕ್ಯಾಪ್ಟನ್ ಎಡ್ರಿಕ್ ಮತ್ತೆ ಅದೇ ಶಾಲೆಗೆ ಎಲ್ಲರನ್ನೂ ತಂದು ಬಿಟ್ಟ. ಬಸ್ಸು ಇಳಿಯುವಾಗ ಸೀಟಿನಲ್ಲೇ ಕುಳಿತು ಕತ್ತು ತಿರುಗಿಸಿ ಪ್ರತಿಯೊಬ್ಬರನ್ನೂ ನೋಡಿ ಮುಗುಳ್ನಗುವ ಎಡ್ರಿಯನ್ನು ನೋಡಿ ಹೃದಯ ತುಂಬಿ ಬಂತು. ಮಾಡುವ ಕೆಲಸದಲ್ಲಿ ಎಷ್ಟೊಂದು ಶ್ರದ್ಧೆ, ಪ್ರೀತಿ ಇವನಿಗೆ!

ರಾತ್ರಿಯ ಊಟ ಎಂಟು ಗಂಟೆಗೆ ಎಂದು ಮಮತಾ ಮೊದಲೇ ಸೂಚನೆ ಕೊಟ್ಟಿದ್ದಳು. ಮಧ್ಯಾಹ್ನ ಒಂದು ಸಣ್ಣ ನಿದ್ದೆ ತೆಗೆದ ಶಾಲೂ ಬೆಳಗಿನಿಂದ ಹಾಕಿದ್ದ ಜೀನ್ಸ್ ತೆಗೆದು ಕುರ್ತಿ ಮತ್ತು ಲೆಗ್ಗಿಂಗ್ಸ್ ಧರಿಸಿ ಮೇಲೊಂದು ಸ್ವೆಟರ್ ಹಾಕಿದಳು. ಮೇಲಿಂದ ರೇಶ್ಮೆಯ ಸ್ಟೋಲ್ ಹಾಕಿಕೊಂಡು ಕೆಳಗಿಳಿದಳು. ಇಂದೂ, ಜಾನಕಿ ಇನ್ನೂ ಮಲಗಿಯೇ ಇದ್ದರು. ಇವರ ಹೋಟೆಲ್ಲಿನ ಎದುರುಗಡೆ ಕೂಡ ಇಂಥವೇ